
ಮಧುರೈ





SRI MEENAKSHI - MADURAI

ಮಧುರೈ

1-11-87 ನವರಾಜ್ಯೋತ್ಸವ

By

V. MEENA

PUBLISHERS:

HARIKUMARI ARTS
CAPE COMORIN


 [Price: Rs. 2-00



MEENAKSHI'S WEDDING (MADURAI)

ಮಧುರೈ

ಪುರಾತನ ಕಾಲದಿಂದ ಸಿರಿದಮಿಳಿನ ಭಾಷಾ ಸಂಸ್ಕೃತಿಗಳನ್ನು ಪೋಷಿಸಿ ಬೆಳೆಸಿಕೊಂಡ ಪಾಂಡ್ಯ ದೇಶದ ಕೇಂದ್ರ ಸ್ಥಳವು ಮದುರೈ. ವೈಗೈ ನದಿಯ ತೀರದಲ್ಲಿ ವಿಸ್ತೃತವಾಗಿ ಬೆಳೆದ ಮಹಾ ನಗರವಿದು. ಪರಮೇಶ್ವರನು ಸುಂದರೇಶ್ವರನೆನಿಸಿ, ದೇವಿ ಮೀನಾಕ್ಷಿಯೊಂದಿಗೆ ಆಲಯಸ್ಥನಾಗಿರುವುದು ಇಲ್ಲಿಯೇ. ಧರ್ಮಚತುಷ್ಟಯರೆನಿಸಿದ ಕವಿ ಮಹನೀಯರಿಂದ ಸ್ತುತಿ ಪಾಡಿಸಿಕೊಂಡ ದೇವದೇವಿಯರಿರುವ ಪುಣ್ಯ ನಗರವಿದು.




ತಮಿಳು ಸಂಘಗಳ ನೆಲೆಬೀಡಾದ ಮದುರೈಯ ಐದು ಶ್ರೀ
ಲ್ಲೊಂದಾದುದು "ವೆಳ್ಳಿಯಂಬಲಂ". ಇಲ್ಲಿ ಶಕ್ತೀದೇವಿ ಪಾಂಡ್ಯ
ಯಾಗಿ ಅವತರಿಸಿ ಗದ್ದುಗೆ ಏರಿ ರಾಜ್ಯವಾಳಿ ಪರಮೇಶ್ವರನನ್ನು
ಕೊಂಡಿದ್ದಾಳೆ. ಮಹಾದೇವನು ತನ್ನ ಭಕ್ತರಿಗಾಗಿ 64 ಲೀಲೆಗಳ
ಪ್ರದರ್ಶಿಸಿರುವನು.

ಮದುರೈಯ ಕೀರ್ತಿಯನ್ನು ಪರಿಮಳಿಸುವಂತಹ ಕಾವ್ಯ ಗ್ರ
ಹಲವಿವೆ. ಮದುರೈಯನ್ನು ತಾವರೆಯಾಗಿ, ದೇವಾಲಯವನ್ನು
ಕೇಂದ್ರವಾಗಿ, ಸುತ್ತಲಿನ ಬೀದಿಗಳನ್ನು ಹೂವಿನ ಎಸಳುಗಳಾಗಿ ಕಾ
ವರ್ಣಿಸಲ್ಪಟ್ಟಿವೆ.

ಮದುರೈಯ ಮಾನದ ಹೊಗಳಿಕೆಗೆ ಕಾರಣವಾಗಿ ನೆಲೆ ನಿಂತ ಮೀ
ದೇವಿಯಾಲಯವು ಬೃಹತ್ತಾದ ತಮಿಳರ ವಾಸ್ತು ಶಿಲ್ಪ ಕಲೆಗಳ ಪ್ರಾ
ತೆಗೆ ಪ್ರಮುಖ ನಿದರ್ಶನವಾಗಿ ಬೆಳಗುತ್ತಿದೆ.

ಮೇಲುಗೋಪುರ ಮತ್ತು ಸ್ವಾಮಿಯಾ




ಕಣ್ತುಂಬುವ ನಿಸರ್ಗ ಸೌಂದರ್ಯದ ಹಿನ್ನೆಲೆಯಲ್ಲಿ ಮಹೋನ್ನತವಾಗಿ ಅಂಬರ ಚುಂಬಿತ ಗೋಪುರಗಳು ಎರಡು ಮೈಲಿ ದೂರದಿಂದಲೇ ನಮ್ಮನ್ನು ಸ್ವಾಗತಿಸುತ್ತವೆ. ದೇವಿಯ ಆಲಯವೇ ನಗರದ ನಾಯಕ. ಮದುರೈ ದೇವಾಲಯದಲ್ಲಿ ಮೊದಲನೇ ಸೇವೆ ಮಹಾತಾಯಿ ಮೀನಾಕ್ಷಿಗೇ. ಆದುದ ರಿಂದ ದರ್ಶನಕ್ಕೆ ಬರುವವರು ಮೂಡು ದಿಕ್ಕಿನ ಬೀದಿಯಲ್ಲಿರುವ ಅಮ್ಮನವರ ಸನ್ನಿಧಿ ದ್ವಾರದಿಂದ ಪ್ರವೇಶಿಸುವುದೇ ಇಲ್ಲಿಯ ಪದ್ಧತಿ.

ಅಷ್ಟಶಕ್ತಿ ಮಂಡಪಂ

ಅಷ್ಟಶಕ್ತಿ ಮಂಡಪವು ಅಮ್ಮನವರ ಗುಡಿಯ ಮುಂದೆಯೇ ಇದೆ. ಬಾಗಿಲಲ್ಲೇ ವಿನಾಯಕ ಮತ್ತು ಮುರುಗನ್ ಅಂದರೆ ಸುಬ್ರಹ್ಮಣ್ಯರು ಕಾಣು ವರು. ಅವರ ನಡುವೆ ಮೀನಾಕ್ಷಿ ಕಲ್ಯಾಣದ ಕಥಾ ರೂಪಗಳು ನಮ್ಮ ಕಣ್ಣುಗಳನ್ನು ಎಳೆಯುತ್ತವೆ. ಒಳಗಡೆ ನಿಂತಿರುವ ದೊಡ್ಡದಾದ ಎಂಟು ಕಂಬ ಗಳಲ್ಲಿ ಅಷ್ಟಶಕ್ತಿಗಳ ಶಿಲ್ಪ ಸೌಂದರ್ಯವು ಬೆಳಗುತ್ತದೆ. ತಿರುವಿಳೈಯಾಡಲ್ ಎಂಬ ಶಿವಲೀಲಾ ವಿಲಾಸಗಳ ಚಿತ್ರಗಳು ತುಂಬಿದ ಈ ಮಂಡಪದಲ್ಲಿ, ಮೀನಾಕ್ಷಿ, ಧರ್ಮ ಚತುಷ್ಟಯರು, ದ್ವಾರಪಾಲಕರು ಶಿಲ್ಪ ವಿಗ್ರಹಗಳಾಗಿ ಕಾಣುತ್ತಾರೆ.

ಮೀನಾಕ್ಷಿ ನಾಯಕನ್ ಮಂಡಪಂ

ಅಷ್ಟಶಕ್ತಿ ಮಂಡಪವನ್ನು ದಾಟಿದ ಕೂಡಲೇ ಮೀನಾಕ್ಷಿ ನಾಯಕನ್ ಮಂಡಪಕ್ಕೆ ಬರುತ್ತೇವೆ. ಮೇಲ್ಭಾಗದಲ್ಲಿ ಯಾಳ್ಳೀ ಎಂಬ ತೋರಣ ಶಿಲ್ಪವೂ, ಕೆಳಭಾಗದಲ್ಲಿ ಚಿಕ್ಕ ಚಿಕ್ಕ ಶಿಲ್ಪ ವಿಗ್ರಹಗಳೂ ತುಂಬಿದ ಆರು ವರಿಸೆಯ ಕಂಬಗಳು ಈ ಮಂಡಪವನ್ನು ಅಲಂಕರಿಸಿವೆ. ಈ ಮಂಡಪವನ್ನೂ ಅಷ್ಟಶಕ್ತಿ ಮಂಡಪವನ್ನೂ ಹೊಂದಿಸುವ ಒಂದು ಚಿಕ್ಕ ಮಂಡಪದಲ್ಲಿರುವ ಬೇಡಬೇಡತಿಯರ ಶಿಲ್ಪಗಳನ್ನು ನೋಡಿರಿ. ಈ ಮೀನಾಕ್ಷಿ ನಾಯಕನ್ ಮಂಡಪದ ಪಶ್ಚಿಮದ ಕೊನೆಯಲ್ಲಿ ಹಿತ್ತಾಳೆಯ ಸಾವಿರದೆಂಟು ದೀಪ ಪ್ರಣತೆಗಳು ಕಣ್ತುಂಬುವ ದೃಶ್ಯ.



ಮುದಲಿಪಿಳ್ಳೈ ಮಂಡಪಂ

ಮೀನಾಕ್ಷಿ ನಾಯಕನ್ ಮಂಡಪದ ಪಕ್ಕದಲ್ಲಿ ಕತ್ತಲೆಯ ಮಂಡಪವೆನಿಸಿದ ಮುದಲಿಪಿಳ್ಳೈ ಮಂಡಪವಿದೆ. ಇಲ್ಲಿರುವ ಭಿಕ್ಷಾಟನರ್ ದೇವನ

ಸೌಂದರ್ಯದಲ್ಲಿ ಮೋಹಿತರಾಗಿ ನಿಂತಿರುವ ದಾರುಕಾವನದ ಮುನಿಪತಿಯರನ್ನು ನೋಡುವಾಗ ಅಲ್ಲಿಯೇ ಮೋಹಿನಿಯ ಮಂಡಪವನ್ನೂ ಕಾಣುವಿರಿ. ವಿನಾಯಕ, ಮುರುಗನ್ ಮತ್ತು ಈ ಮಂಡಪವನ್ನು ಕಟ್ಟಿದ ಕಡಂದೈ ಮುದಲಿಯಾರ್ ಇವರ ಶಿಲ್ಪಗಳೂ ಒಳ್ಳೆಯ ಕಲಾ ಸೌಂದರ್ಯದಿಂದ ಒಪ್ಪುತ್ತವೆ.

ಹೊಂದಾಮರೆ ಕೊಳ

ಮುದಲಿಪಿಳ್ಳೈ ಮಂಡಪವನ್ನು ದಾಟಿದರೆ ಪೊಟ್ರಾಮರೈಕುಳಂ ಎಂಬ ಹೊಂದಾವರೆ ಕೊಳವಿದೆ. ಇಂದ್ರನು ಪೂಜೆಗಾಗಿ ಈ ಕೊಳದಿಂದ ಸ್ವರ್ಣ ಕಮಲಗಳನ್ನು ಹರಿದುಕೊಂಡನಂತೆ. ತಿರುಕ್ಕುರಳ್ ಎಂಬ ಸೂತ್ರಗ್ರಂಥವನ್ನು ಪಂಡಿತರ ಸಂಘವು ಈ ಕೊಳದಲ್ಲಿ ಪರೀಕ್ಷೆಗಿಟ್ಟು ಸ್ವೀಕರಿಸಿದೆ ಎನ್ನುತ್ತಾರೆ. ಈ ಕೊಳವು ಉದ್ದ ಚೌಕಾಕಾರವಾಗಿ ಸುಂದರವಾದ ಮೆಟ್ಟಿಲುಗಳನ್ನು ಒಳಗೊಂಡಿದೆ. ಉತ್ತರ ತೀರವಲ್ಲಿರುವ ಕಂಬಗಳಲ್ಲಿ 24 ಪುರಾತನ ಮಹಾಕವಿಗಳ ಶಿಲಾ ವಿಗ್ರಹಗಳನ್ನು ಕಾಣಬಹುದು. ಈ ದೇವಾಲಯವನ್ನು ಮೊತ್ತಮೊದಲು ದರ್ಶಿಸಿದ ಧನಂಜಯನೆಂಬ ವಣಿಗ್ವರನೂ, ದೇವಾಲಯಗಳನ್ನೂ ನಗರವನ್ನೂ ನಿರ್ಮಾಣ ಮಾಡಿದ ಕುಲಶೇಖರ ಪಾಂಡ್ಯನೂ ಎರಡು ಕಂಬಗಳಲ್ಲಿ ನಮಗೆ ದರ್ಶನವೀಯುತ್ತಾರೆ. ಗೋಡೆಗಳಲ್ಲಿ ತಿರುವಿಳೈಯಾಡಲ್ ಪುರಾಣದ ಲೀಲಾವಿಲಾಸಗಳನ್ನು ವರ್ಣಚಿತ್ರಗಳಾಗಿ ತೀಡಲ್ಪಟ್ಟಿವೆ. ಮೂಡುಗಡೆಯ ತೀರದಲ್ಲಿ ನಿಂತು ಅಮ್ಮನವರ ಮತ್ತು ಸ್ವಾಮಿಯ ಆಲಯಗಳ ಸ್ವರ್ಣ ವಿಮಾನಗಳನ್ನು ದರ್ಶನ ಮಾಡಬಹುದು. ತೆಂಕು ತೀರದ ಮಂಡಪದಲ್ಲಿ ತಿರುಕ್ಕುರಳಿನ ಪೂರ್ತಿ ಸೂತ್ರಗಳನ್ನು ಹಾಲುಗಲ್ಲಿನಲ್ಲಿ ಕೊರೆಯಿಸಿ ಗೋಡೆಗೆ ಹೊಂದಿಸಿದ್ದಾರೆ.

ಊಂಜಲ್ ಮಂಡಪಂ

ಹೊಂದಾವರೆ ಕೊಳದ ಪಶ್ಚಿಮ ಬದಿಯಲ್ಲಿ ಊಂಜಲ್ ಮಂಡ ಇಲ್ಲಿ ಹಾಲುಗಲ್ಲಿನ ಕಂಬಗಳನ್ನೊಳಗೊಂಡ ಉಯ್ಯಾಲೆಯ ವೇದಿ ಎತ್ತರದ ಸೂರಿನ ಮುಂಭಾಗದ ತೊಲೆಗಳಲ್ಲಿ ಮುರುಗನ ಅರುಪಡೈ ಎಂಬ ಆರು ದೇವಾಲಯಗಳಿಗೆ ಸಂಬಂಧಿಸಿದ ಚಿತ್ರಗಳೂ ಇವೆ. ಕ ತೀರದಲ್ಲಿರುವ ನಿಲುವು ಜಗಲಿಯಲ್ಲಿ ರಾಣಿ ಮಂಗಮ್ಮ ಮತ್ತು ಅ ರಾಮಪ್ಪಯ್ಯನ್ ಇವರ ರೂಪ ಶಿಲ್ಪಗಳನ್ನೂ ನೋಡಬಹುದು.

ಕಿಳಿಕ್ಕೂಟ್ಟು ಮಂಡಪಂ

ಊಂಜಲ್ ಮಂಡಪದ ಹತ್ತಿರದಲ್ಲಿ ಕಿಳಿಕ್ಕೂಟ್ಟು ಮಂಡಪ ಗೂಡಿನಲ್ಲಿಟ್ಟ ಗಿಳಿಗಳಿಂದ ಇದಕ್ಕೆ ಈ ಹೆಸರು ಬಂದಿದೆ. ಇಲ್ಲಿ ವ ಸುಗ್ರೀವ, ಪುರುಷಾಮೃಗ, ದ್ರೌಪದಿ ಇವರ ಸುಂದರ ಶಿಲ್ಪ ವಿಗ್ರಹಗ ನೋಡುವಿರಿ. ಮಂಡಪದ ಮೇಲ್ಭಾಗದ ಮುಂಗಡೆಯ ತೊಲೆ ವಿನಾಯಕ, ಮುರುಗನ್, ಪರಮಶಿವರ ಬೇರೆ ಬೇರೆ ಭಂಗಿಗಳ ವರ್ಣ ಗಳು ಕಣ್ಮನಗಳನ್ನು ರಂಜಿಸುವಂಥವು. ಅಮ್ಮನವರ ಸನ್ನಿಧಿಗೆ ನೇ ಎದುರಿನಲ್ಲಿ ಕಲ್ಯಾಣವೈಭವ, ಮಕುಟಾಭಿಷೇಕದ ಭವ್ಯ ದೃಶ್ಯ ದೊ ದೊಡ್ಡ ವರ್ಣ ಚಿತ್ರಗಳಾಗಿ ತೀಡಲ್ಪಟ್ಟು ಅತ್ಯಾಕರ್ಷಕವಾಗಿವೆ.

ಮೀನಾಕ್ಷಿ ಆಲಯ

ಇದನ್ನು ಅಮ್ಮನ್ ಕೋಯಿಲ್ ಅನ್ನುತ್ತಾರೆ. ಕಿಳಿಕ್ಕೂಟ್ಟು ಮಂ ದಿಂದ ವೇಂಬತ್ತೂರಾರ್ ಬಾಗಿಲಿನಲ್ಲಿ ಮೀನಾಕ್ಷಿ ದೇವಿಯ ಸನ್ನಿಧಾ ಹೋಗಬಹುದು. ಈ ಅಮ್ಮನವರ ಆಲಯಕ್ಕೆ ಎರಡು ಪ್ರಾಕಾರಗಳ ಎರಡನೇ ಪ್ರಾಕಾರದಲ್ಲಿ ಬಂಗಾರದ ಧ್ವಜಸ್ತಂಭವೂ, ತಿರುಮಲೈ ನಾಯ ಮಂಡಪವೂ, ವಿಘ್ನೇಶ್ವರ, ಕೂಡರ್ ಕುಮರರ ಸನ್ನಿಧಿಗಳೂ, ಎರ ದೊಡ್ಡ ದ್ವಾರಪಾಲಕರ ತಾಮ್ರ ವಿಗ್ರಹಗಳೂ ಇರುತ್ತವೆ. ಕೂಡ ಕುಮರ ಸನ್ನಿಧಿಯಲ್ಲಿ ಅರುಣಗಿರಿನಾಥರ ತಿರುಪ್ಪುಗಳ್ ಎಂಬ ಸ್ತೋ

ಪಾತಗಳು ಕೊರೆಯಲ್ಪಟ್ಟಿವೆ. ಈ ಪ್ರಾಕಾರದೊಳಗಿರುವ ಆರು ಕಾಲುಗಳ ಪೀಠದಲ್ಲಿಯೇ ಕುಮರ ಗುರುಪರಶ್ ಎಂಬ ಭಕ್ತ ಕವಿಯ ಮೀನಾಕ್ಷಿಪಿಳ್ಳೈ ತಮಿಳು ಕಾವ್ಯಕ್ಕೆ ಆವಿಷ್ಕರಣೋತ್ಸವ ನಡೆದಿದೆ. ಇದರ ಬಾಗಿಲಿನಲ್ಲಿ ನಾವು ಮೀನಾಕ್ಷಿ ಆಲಯದ ಮಹಾ ಮಂಡಪವನ್ನು ಸೇರುತ್ತೇವೆ. ಇದೇ ಮೊದಲನೇ ಪ್ರಾಕಾರ. ಇಲ್ಲಿ ಐರಾವತ, ವಿನಾಯಕ ಮತ್ತು ಕುಮರನ್ ಸನ್ನಿಧಿ, ಶಯನ ಮಂದಿರಗಳಿರುತ್ತವೆ. ಪಶ್ಚಿಮದಲ್ಲಿ ಅರ್ದ ಮಂಡಪ, ಗರ್ಭಗುಡಿಗಳಿರುತ್ತವೆ. ಗರ್ಭಗೃಹದೊಳಗೆ ಕೈಯಲ್ಲಿ ಗಿಳಿಯನ್ನೇರಿಸಿಕೊಂಡ ಹೂಚೆಂಡನ್ನು ಧರಿಸಿ ನಿಂತಿರುವ ದೇವಿ ಮೀನಾಕ್ಷಿಯನ್ನು ದರ್ಶನ ಮಾಡುತ್ತೇವೆ. ಕರುಣಾರಸವನ್ನು ಒಸರಿಸಿಕೊಂಡು, ಅಂಗೈಯರ್‌ಕಣ್ಣೆ ಎಂದೂ, ಅಮ್ಮನವರೆಂದೂ ಖ್ಯಾತಳಾದ ಮೀನಲೋಚನಿ ಮೀನಾಕ್ಷಿಯ ಅಡಿದಾವರೆಗಳಿಗೆ ಕೈಮುಗಿದುಕೊಂಡು ಪರವಶರಾಗುತ್ತೇವೆ.

ಕಿಳಿಕ್ಕೂಟ್ಟು ಮಂಡಪಂ



ಮುಕ್ಕುರುಣಿ ವಿನಾಯಕರ್

ಮೀನಾಕ್ಷಿಯ ದರ್ಶನದಿಂದ ಪುಲಕಾಂಗಿತರಾದ ನಾವು ಸ
ಆಲಯಕ್ಕೆ ಹೋಗುತ್ತೇವೆ. ಕಿಳಿಕ್ಕೂಟ್ಟು ಮಂಡಪದ ದಾರಿಯ
ಗಟ್ಟು ಗೋಪುರದ ದ್ವಾರವನ್ನು ದಾಟಿ ಹೋದರೆ, ನಮ್ಮನ್ನು
ನೋಡಿಕೊಂಡು ಮುಕ್ಕುರುಣಿ ವಿನಾಯಕರ್ ಎನಿಸಿದ ವಿಘ್ನೇ
ತ್ತಾನೆ. ಎಂಟಡಿ ಎತ್ತರದ ಈ ವಿನಾಯಕ ವಿಗ್ರಹವು, ತಿ
ನಾಯಕನು ವಂಡಿಯೂರ್ ತೆಪ್ಪಕ್ಕುಳವನ್ನು ಅಗೆಯಿಸುವಾಗ ದ
ವಿಗ್ರಹವೆಂದು ಹೇಳುತ್ತಾರೆ.

ಸ್ವಾಮಿಯಾಲಯದ ಎರಡನೆಯ ಪ್ರಾಕಾರದಲ್ಲಿ ಪ್ರಾಚೀನ ಕ
ದವರ ಮತ್ತು ಜ್ಞಾನ ಸಂಬಂಧರ್ ಅವರ ಗುಡಿಗಳಿವೆ. ಇಲ್ಲಿಯ ಪ್ರ
ಮಂಡಪದಲ್ಲಿ ಅಂದವಾದ ನಟರಾಜ ಶಿಲ್ಪವೂ ಇದೆ. ಈ ಪ್ರಾಕಾರದ
ಸ್ವಾಮಿ ಸನ್ನಿಧಿಗೆ ಎದುರಾಗಿ ಕಂಬತ್ತಡಿ ಮಂಡಪವಿರುತ್ತದೆ.

ಕಂಬತ್ತಡಿ ಮಂಡಪಂ

ಅದ್ಭುತವಾದ ಬಗೆಬಗೆಯ ಶಿಲ್ಪ ವಿಗ್ರಹಗಳನ್ನು ಧರಿಸಿ, ಶಿಲ್ಪಕ
ಅತ್ಯುತ್ತಮವಾದೊಂದು ನಿದರ್ಶನವಾಗಿದೆ ಈ ಮಂಡಪ. ನೋಡಿದ

ಕಣ್ಮನಗಳನ್ನು ಸೂರೆಗೊಳ್ಳುವ ಶಿಲ್ಪಗಳಿಂದ ರಾರಾಜಿಸುವಂತಹುದು.
ಕಂಬತ್ತಡಿ ಮಂಟಪದ ನಡುವೆ ನಂದಿಯೂ, ಬಲಿಪೀಠವೂ, ಧ್ವಜಸ್ತಂಭ
ಇವೆ. ಸುತ್ತಲಿನ ಎಂಟು ಕಂಬಗಳೂ ಈಡು ಜೊಡಿಲ್ಲದ ಸುಂದರ
ಗಳನ್ನು ಧರಿಸಿ ಗಂಭೀರವಾಗಿ ನಿಂತಿವೆ. ತ್ರಿಪುರ ದಹನ ಮಾಡಿದ
ಸೋಮಸ್ಕಂದ, ಅರ್ಧನಾರೀಶ್ವರ, ಇಂತಹ ಮಹಾಶಿವನ ಅನೇಕ ಭ
ಭಂಗಿಗಳು, ವಿಷ್ಣುವಿನ ದಶಾವತಾರ ದೃಶ್ಯಗಳು ನಮ್ಮನ್ನು ನಿಲ್ಲಿಸಿ
ಯಿಕ್ಕದೆ ನೋಡಿಸಿ ಭಾವಾನಂದದಲ್ಲಿ ತೇಲಿಸಿಬಿಡುತ್ತವೆ. ಇವೆಲ್ಲಕ್ಕಿಂತ
ಶ್ರೇಷ್ಠವಾಗಿರುವ ಮೀನಾಕ್ಷೀಸುಂದರೇಶ್ವರರ ಕಲ್ಯಾಣ ವೈಭವದ ಶಿಲ್







ಕಲ್ಲಾನೆ ಕಬ್ಬು ತಿನ್ನುವುದು


ನಮ್ಮನ್ನು ಮೈಮರೆಸುವಂತಹುದು. ಸೌಂದರ್ಯದಲ್ಲಿ, ಯೋಜನೆಯಲ್ಲಿ ಇದಕ್ಕೆ ಎಣೆಯಾದ ಶಿಲ್ಪವು ಬೇರೊಂದಿರಲಾರದು. ಮೀನಾಕ್ಷಿಯ ವದನದಲ್ಲಿರುವ ನಸುಲಜ್ಜೆ ಬೆರೆತ ಆನಂದ, ಸುಂದರೇಶ್ವರನ ಮುಖಮಂಡಲದ ಉತ್ಸಾಹ, ಪೌರುಷ, ಗಾಂಭೀರ್ಯಗಳನ್ನು ಕಲ್ಲಿನಲ್ಲಿ ಹೇಗೆ ಕೊರೆದರೋ ಎಂದು ಬೆರಗಾಗಿ, ಶಿಲ್ಪಿಯನ್ನು ಹೊಗಳುತ್ತೇವೆ.

ಕಂಬತ್ತಡಿ ಮಂಡಪದ ಪಕ್ಕದಲ್ಲಿರುವ ಎರಡು ಕಂಬಗಳಲ್ಲಿ ಅಗ್ನಿ ವೀರಭದ್ರ, ಅಘೋರ ವೀರಭದ್ರರ ಶಿಲ್ಪ ವಿಗ್ರಹಗಳೂ, ಮತ್ತೊಂದು ಕಂಬದಲ್ಲಿ ಶಿವನ ಊರ್ಧ್ವತಾಂಡವ, ಕಾಳಿಕಾದೇವಿಯ ರೂಪಗಳೂ ಕಣ್ಣೆದುರು ನಿಲ್ಲುತ್ತವೆ.

ಕಂಬತ್ತಡಿ ಮಂಡಪಂ







ಸ್ವಾಮಿ ಸನ್ನಿಧಿ

ಸ್ವಾಮಿ ಸನ್ನಿಧಿಗೆ ಹೋಗುವ ದ್ವಾರದ ಎರಡು ಬದಿಗಳಲ್ಲಿ 12 ಅಡಿ ಎತ್ತರದ ದ್ವಾರಪಾಲಕರು ಭವ್ಯ ಗಂಭೀರವಾಗಿ ನಿಂತಿರುವರು. ಅಪ್ಪರ್ ಸುಂದರರ್, ಸಂಬಂಧರ್, ಮಾಣಿಕ್ಕವಾಚಕರ್ ಇವರ ಚಿಕ್ಕ ರೂಪಗಳನ್ನೂ ಇಲ್ಲಿ ನೋಡಬಹುದು.

ಒಳಗೆ, ಮೊದಲನೇ ಪ್ರಾಕಾರದಲ್ಲಿ ತಿರುವಿಳೈಯಾಡಲ್ ಪುರಾಣ ವನ್ನು ಆವಿಷ್ಕರಣಗೊಳಿಸಿದ ಆರುಕಾಲಿನ ಪೀಠವು ಕಾಣುತ್ತದೆ. ಆದು ಕಲಾತ್ಮಕವಾಗಿ ತಾಮ್ರದ ದ್ವಾರಪಾಲಕರಿಂದ ಕೂಡಿದೆ. ಮಂಡಪದ

ಸುತ್ತಲೂ 63 ನಾಯನ್‌ಮಾರ್‌ಗಳೆಂಬ ಮಹಾ ಭಕ್ತರನ್ನೂ, ಸರಸ್ವತಿಯ ಗುಡಿಯನ್ನೂ ನೋಡಿವಿರಿ, ಅಲ್ಲದೆ ಉತ್ಸವ ಮೂರ್ತಿ, ಕಾಶೀ ವಿಶ್ವನಾಥ, ಭಿಕ್ಷಾಟನರ್, ಸಿದ್ಧರು, ದುರ್ಗೆ ಇವರೆಲ್ಲರ ಗುಡಿಗಳೂ ಇಲ್ಲಿವೆ. ಸ್ಥಲವೃಕ್ಷ ವಾದ ಕದಂಬ ವೃಕ್ಷ, ಕನಕಸಭೆ, ಯಾಗಶಾಲೆ, ರತ್ನಸಭೆ, ಸಾಕ್ಷಿ ಹೇಳಿದ ವನ್ನೀ ವೃಕ್ಷ, ಬದಿಯಲ್ಲೊಂದು ಬಾವಿ ಇವುಗಳನ್ನೆಲ್ಲಾ ಈ ಪ್ರಾಕಾರದಲ್ಲಿ ನೋಡಬಹುದು.

ಆರು ಕಾಲು ಪೀಠವನ್ನು ದಾಟಿ ಬೆಳ್ಳಿಯಂಬಲವನು ತಲಪುವೆವು. ಅಲ್ಲಿ ಕಾಲನ್ನು ಮಾರ್ತಡಿಸಿಕೊಂಡ ನೃತ್ಯಭಂಗಿಯಲ್ಲಿ ನಟರಾಜನ ದರ್ಶನ ವಾಗುತ್ತದೆ. ಅಲ್ಲಿಂದ ಗರ್ಭಗುಡಿಗೆ ಹೋಗುವೆವು. ಗರ್ಭ ಗೃಹವನ್ನು ಇಂದ್ರ ವಿಮಾನವೆಂದು ಹೇಳುತ್ತಾರೆ. 8 ಆನೆಗಳು, 32 ಸಿಂಹಗಳು, 64 ಭೂತಗಣಗಳು ಈ ವಿಮಾನವನ್ನು ಹೊತ್ತುಕೊಂಡಿರುವಹಾಗೆ ನಿರ್ಮಿಸ ಲ್ಪಟ್ಟಿದೆ. ಗರ್ಭ ಗೃಹದೊಳಗೆ ಲಿಂಗರೂಪದಲ್ಲಿ ಕರ್ಪೂರ ಚೊಕ್ಕರ್, ಸೋಮಸುಂದರರ್, ಸುಂದರೇಶ್ವರರ್ ಎಂದೆಲ್ಲಾ ಕರೆಯಲ್ಪಡುವ ಚೊಕ್ಕ ನಾಥಸ್ವಾಮಿಯನ್ನು ಮಣಿದು ಕೃಪಾಭಿಕ್ಷೆ ಪಡೆದು ಧನ್ಯರಾಗುತ್ತೇವೆ.

ಸ್ವಾಮಿಯನ್ನು ದರ್ಶಿಸಿ, ಕಂಬತ್ತಡಿ ಮಂಡಪದ ದಾರಿಯಾಗಿ ಹೊರಗೆ ಬಂದು ದೇವಾಲಯ ಉಳಿದ ಭಾಗಗಳಿಗೆ ಹೋಗುವೆವು.



ನೃತ್ಯಗಣಪತಿ (ಆಯಿರಕ್ಕಾಲು ಮಂಡಪಂ)

ಆಯಿರಕ್ಕಾಲ್ ಮಂಡಪಂ

ಇತರ ಮಂಡಪಗಳಿಗಿಂತ ಬಹಳ ದೊಡ್ಡ ಮಂಡಪವಿದು. ಬಾಗಿಲಿನ ಮೇಲ್ಭಾಗದ ಛಾವಣಿಯಲ್ಲಿ 60 ಸಂವತ್ಸರಗಳ ಚಕ್ರವು ಕೆತ್ತಲ್ಪಟ್ಟಿರುತ್ತದೆ. ಮಂಡಪದ ಮುಂಭಾಗದಲ್ಲಿರುವ ಕಣ್ಣಪ್ಪರ್, ಭಿಕ್ಷಾಟನರ್, ಚಂದ್ರಮತಿ, ಕೊರವ, ಕೊರವಂಜಿಯರ ಶಿಲ್ಪಗಳ ಸೌದರ್ಯವನ್ನು ಕಂಡು ಆಶ್ಚರ್ಯದಲ್ಲಿ ತೇಲುವೆವು. ಒಳಗಡೆ ಲೆಕ್ಕವಿಲ್ಲದಷ್ಟು ಶಿಲ್ಪಗಳು ತುಂಬಿದ 985 ಕಂಬಗಳು ನಿಂತಿವೆ. ಈ ಕಂಬಗಳನ್ನು ಯಾವ ಕೋನದಲ್ಲಿ ನಿಂತು ನೋಡಿದರೂ ನೇರಾದ ಸಾಲಿನಲ್ಲಿರುವಹಾಗೆ ನಿಲ್ಲಿಸಲ್ಪಟ್ಟಿರುವುದನ್ನು ನೋಡುವಾಗ ಬೆರಗಾಗುತ್ತೇವೆ. ನೃತ್ಯಗಣಪತಿ, ಸರಸ್ವತಿ, ಅರ್ಜುನ, ರತಿ, ಮೋಹಿನಿ,


ಮನ್ಮಥ, ಕಲಿ ಮೊದಲಾದ 20 ಅದ್ಭುತ ಶಿಲ್ಪಗಳು ಇಲ್ಲಿವೆ. ಮಂಡಪದ ಮರು ಕೊನೆಯ ನಡುವೆ ನಟರಾಜನ ಸೌಂದರ್ಯ ಸೂಸುವ ಶಿಲಾ ವಿಗ್ರಹವೂ ಇದೆ.

ಆಯಿರಕ್ಕಾಲ್ ಮಂಡಪಂ










ಈಗ ಈ ಮಂಡಪದಲ್ಲಿ ಒಂದು ಕಲಾ ಪ್ರದರ್ಶನವು ನಡೆದುಕೊಂಡಿದೆ. ಕಲೆಯ ಸೌಂದರ್ಯದೊಂದಿಗೆ ದೈವಿಕ ಪ್ರಣಶ ಹರಡಿಕೊಂಡಿರುವ ದೇವತೆಗಳ ವಿಗ್ರಹಗಳನ್ನೂ, ಇನೂ ಹಲವು ಹಳೆಯ ಕಾಲದ ಸುಂದರ ವಸ್ತು ವಿಶೇಷಗಳನ್ನೂ ಕಂಡು ಆನಂದಿಸಬಹುದು.

ಮಂಗೈಯರ್ಕರಸಿ ಮಂಡಪಂ

ಮಂಗೈಯರ್ಕರಸಿ ಮಂಡಪಂ ಅಂದರೆ ಅಂಗನೆಯರರಸಿಯ ಮಂಟಪ ವೆಂದು ಭಾವ. ಸಾವಿರ ಕಾಲು ಮಂಡಪದ ದಕ್ಷಿಣ ದಿಕ್ಕಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಮಂಡಪವಿದು. ಗೂನಿಪಾಂಡ್ಯ, ಮಂಗೈಯರ್ಕರಸಿ, ಜ್ಞಾನ ಸಂಬಂಧರ್, ಕುಲಚ್ಚಿರೈಯಾರ್, ಎಂಬವರ ರೂಪಾಕೃತಿಗಳು ಇಲ್ಲಿವೆ. ನಡುವಿನಲ್ಲಿ ಒಂದು ಶಿವಲಿಂಗವೂ ಇದೆ.





ದಕ್ಷಿಣದ ಗೋಪುರ

ಈ ಮಂಡಪಕ್ಕೆ ದಕ್ಷಿಣದಲ್ಲಿ ಮರುದು ಪಾಂಡ್ಯನಿಂದ ಕಟ್ಟಲ್ಪಟ್ಟ ಶೇರ್ವೈಕಾರರ್ ಮಂಡಪವೂ, ಸುಂದರವಾದ ಮರದ ಭಾವಣೆಯು ತಿರು ಕಲ್ಯಾಣ ಮಂಡಪವೂ ಇಲ್ಲಿವೆ.

ಗೋಪುರಗಳು

ಮೀನಾಕ್ಷೀ ಸುಂದರೇಶ್ವರರ ಆಲಯಗಳಿಗೆ ಪ್ರದಕ್ಷಿಣೆ ಬರುವಹಾಗೆ ಅಂಕಣದಂತಿರುವ ಆಡಿವೀದಿಯಲ್ಲಿ ದೇವಾಲಯದ ನಾಲ್ಕು ದೊಡ್ಡ ದೊಡ್ಡ 9 ಅಂತಸ್ತುಗಳ ನಾಲ್ಕು ಗೋಪುರಗಳು ನಾಲ್ಕು ದಿಕ್ಕುಗಳಲ್ಲಿ ಎದ್ದು ನಿಂತಿವೆ. ದಕ್ಷಿಣದ ಗೋಪುರ ಎಲ್ಲಕ್ಕಿಂತ ಎತ್ತರವಾದುದು. 160 ಅಡಿಗಳು. ಇದು 16ನೇ ಶತಮಾನದಲ್ಲಿ ಶೆಲ್ವಂದಿ ಚೆಟ್ಟಿಯಾರ್ ನಿರ್ಮಿಸಿದುದು. ಇದರ ಬದಿಗಳು ಸ್ವಲ್ಪ ಬಾಗಿದ ಹಾಗಿರುವುದೇ ಇದರ ಪ್ರತ್ಯೇಕ ಸೊಬಗು. 154 ಅಡಿಗಳ ಎತ್ತರದ ಮೇಲು ಗೋಪುರವು ಮದುರೈಗೆ ಬರುವವರಿಗೆ ಮೊದಲು ಕಾಣುವಂತಹದು, ಕೆತ್ತನೆಗಳು ಕಡಿಮೆಯಾಗಿರುವ ಉತ್ತರ ದಿಕ್ಕಿನ ಗೋಪುರ ವನ್ನು ಮೊಟ್ಟೈ ಗೋಪುರವೆನ್ನುತ್ತಾರೆ. ಪೂರ್ವದಿಕ್ಕಿನ ಗೋಪುರವು ಅತಿ ಪ್ರಾಚೀನವಾದುದು. 13ನೇ ಶತಕದಲ್ಲಿ ಮಾರವರ್ಮನ್ ಸುಂದರಪಾಂಡ್ಯ ನಿಂದ ನಿರ್ಮಿಸಲ್ಪಟ್ಟಿತು. ಇದರ ಎತ್ತರ 153 ಅಡಿಗಳು. ಪಶ್ಚಿಮ ಗೋಪುರವನ್ನು 14ನೇ ಶತಾಬ್ದದಲ್ಲಿ ಪರಾಕ್ರಮ ಪಾಂಡ್ಯನು ನಿರ್ಮಿಸಿದನು.

ಇವಲ್ಲದೆ ಚಿತ್ರಗೋಪುರ, ವೆಂಬತ್ತೂರಾರ್ ಗೋಪುರ, ನಡುಕ್ಕಟ್ಟು ಗೋಪುರ, ವೃಷಭಚಿಹ್ನಾಂಕಿತ ಗೋಪುರಗಳಂತಹ ಚಿಕ್ಕ ಗೋಪುರಗಳು ದೇವಾಲಯಕ್ಕೆ ಅಂದಚೆಂದ ಮಹತ್ವಗಳನ್ನು ಕೊಡುವಂತಹವು.

ನಾದ ಸ್ತಂಭಗಳು

ಉತ್ತರ ದಿಕ್ಕಿನ ಆಡಿವೀದಿಯಲ್ಲಿ ದೊಡ್ಡ ಗೋಪುರದ ಬದಿಯಲ್ಲಿ ಐದು ನಾದಸ್ತಂಭಗಳಿವೆ. ಒಂದೊಂದೂ 22 ಚಿಕ್ಕ ಕಂಭಗಳನ್ನೊಳಗೊಂಡಿವೆ. ಇವು ತಟ್ಟಿದರೆ ವಿಧವಿಧವಾದ ಸುನಾದವನ್ನು ಹೊರಡಿಸುವುದೊಂದು ಅದ್ಭುತವೇ ಸರಿ.



ತಿರುಮಲೈನಾಯಕರ್

ಪುದು ಮಂಡಪಂ

ದೇವಾಲಯದ ಹೊರಗೆ ಮೂಡುಗಡೆಯ ಗೋಪುರದ ಎದುರು ವಸಂತಮಂಟಪವೆಂಬ ಹೊಸ ಮಂಟಪವಿದೆ. ತಡಾತಗೈ, ಮೀನಾಕ್ಷೀ ಕಲ್ಯಾಣ ದಂತಹ ಸುಂದರ ಶಿಲ್ಪಗಳಿಂದ, ತಿರುವಿಳೈಯಾಡಲ್ ಕಥೆಗಳನ್ನು ತೋರಿಸುವ ಸುಂದರ ವಿಗ್ರಹಗಳಿಂದ ಈ ಪುದುಮಂಡಪವು ಹೊಸ ಸೊಬಗಿನಿಂದ ಶೋಭಿಸುತ್ತದೆ. ಕಲ್ಲಿನ ಆನೆ ಕಬ್ಬು ತಿನ್ನುವುದನ್ನು, ಕೈಲಾಸಗಿರಿಯನ್ನು ಎತ್ತುವ ರಾವಣನನ್ನು, ಈ ಮಂಟಪವನ್ನು ಕಟ್ಟಿದ ತಿರುಮಲೈ ನಾಯಕ ನನ್ನೂ ಇನ್ನೂ ಕೆಲವು ರಾಜರನ್ನು ಕೂಡಾ ತೋರಿಸುವ ಶಿಲಾ ವಿಗ್ರಹಗಳು ಇಲ್ಲಿವೆ. ಮಂಡಪದ ನಡುವಿನಲ್ಲಿ ಸುಂದರವಾದ ಕರಿ ಗಲ್ಲಿನ ವೇದಿಕೆಯೂ ಇದೆ.

ರಾಯ ಗೋಪುರ

ಪುದು ಮಂಡಪದ ಎದುರಿನಲ್ಲಿ ಒಂದು ದೊಡ್ಡ ಗೋಪುರಕ್ಕಾಗಿ ಮಾಡಲ್ಪಟ್ಟ ಅಡಿಪಾಯವನ್ನು ಕಾಣುತ್ತೇವೆ. ಅದರ ಅಳತೆ ನೋಡಿದರೆ ಈ ರಾಯ ಗೋಪುರವನ್ನು ಪೂರ್ತಿ ಕಟ್ಟಿ ಮುಗಿಸಿದ್ದರೆ. ಭಾರತ ದೇಶದಲ್ಲೇ ಬಹು ದೊಡ್ಡ ಗೋಪುರವೆಂದು ಹೆಸರು ಪಡೆಯುತ್ತಿತ್ತು.

ತಿರುಮಲೈ ನಾಯಕರ್ ಮಹಲು

ಮೀನಾಕ್ಷಿ ದೇವಾಲಯದ ಆಗ್ನೇಯಕ್ಕೆ ಮುಕ್ಕಾಲು ಮೈಲು ದೂರ ದಲ್ಲಿರುವ ತಿರುಮಲೈ ನಾಯಕರ್ ಮಹಲನ್ನು ನೋಡಲೇಬೇಕು. ತನ್ನ ರಾಜಧಾನಿಯನ್ನು ತಿರುಚಿಯಿಂದ ಮದುರೈಗೆ ಬದಲಾಯಿಸಿಕೊಂಡ ತಿರುಮಲೈ ನಾಯಕನು 1634-65ರಲ್ಲಿ ಇದನ್ನು ಕಟ್ಟಿದನು. ಇಟ್ಟಿಗೆ, ಕಲ್ಲು ಮತ್ತು ಸುಣ್ಣದ ಹೊರತು ಮರದ ಸಂಬಂಧವು ಛಾವಣಿ ತೊಲೆಗಳಿಗೆ ಕೂಡ ಇಲ್ಲದಂತೆ ಕಟ್ಟಲ್ಪಟ್ಟಿರುವುದು ಇದರ ವಿಶೇಷ.


ಮಾರಿಯಮ್ಮನ್ ತೆಪ್ಪಕ್ಕುಳಂ

ಮದುರೈ ನಗರದ ಎಲ್ಲೆಯಲ್ಲಿ ನಿರ್ಮಿಸಲ್ಪಟ್ಟ ಈ ದೊಡ್ಡ ಕೊಳವ ವಂಡಿಯೂರ್ ತೆಪ್ಪಕುಳವೆಂತಲೂ ಹೇಳುವರು. 1000 ಅಡಿ ಉದ್ದ 950 ಅಡಿ ಅಗಲವೂ ಇರುವ ಈ ಕೊಳದ ಮಧ್ಯದಲ್ಲಿ ಒಂದು ನ ಮಂಡಪವೂ, ನಾಲ್ಕು ತಿರು ಮಂಡಪಗಳೂ ಇವೆ. ತೈಪೂಶಂ ಎಂಬ ಪು ದಿನದಲ್ಲಿ ಇಲ್ಲಿ ನಡೆಯುವ ತಪ್ಪೋತ್ಸವವು ಕಣ್ಣಿಗೆ ಹಬ್ಬದೌತಣವಾಗಿದೆ.

ಅಳಗರ್ ಕೋಯಿಲ್

ಮದುರೈಯ ಪೂರ್ವಕ್ಕೆ 12 ಮೈಲು ದೂರವಿರುವ ತಿರುಮಾಲಿ ಜೋಲೈ ಎಂಬ ವಿಷ್ಣು ವನದಲ್ಲಿ, ತೋಟದಂತೆ ಮರಗಳು ತುಂಬಿರ ಗುಡ್ಡಗಳ ಸಾನು ಪ್ರದೇಶದಲ್ಲಿ, ಪ್ರಕೃತಿ ಸೌಂದರ್ಯದ ಪ್ರಶಾಂತ ಪ್ರದ


ಮಾರಿಯಮ್ಮನ್ ತೆಪ್ಪಕ್ಕುಳಂ



ದಲ್ಲಿ ಆಳಗರ್ ಕೋಯಿಲ್ ಎಂಬ ವಿಷ್ಣು ದೇವಾಲಯವಿದೆ. ಇಲ್ಲಿರುವ ಉತ್ಸವ ಮೂರ್ತಿ ಅಳಗರ್ ಮಲೆಯ ಅಂದಗಾರ ಸುಂದರರಾಜನ್ ಎನಿಸಿದ್ದಾನೆ. ಇವನಿಗೆ ಮಲೆಯ ಮೇಲೆ ಎರಡು ಮೈಲು ದೂರವಿರುವ ನೂಪುರ ಗಂಗೆಯ ನೀರಿನಿಂದಲೇ ಅಭಿಷೇಕವಾಗಬೇಕು. ಬೇರೆ ನೀರಿನಿಂದ ಅಭಿಷೇಕ ಮಾಡಿದರೆ ಕಪ್ಪಾಗಿ ಬದಲಾಯಿಸುತ್ತಾನೆ. ಚಿತ್ರಾ ಪೂರ್ಣಿಮೆಯ ದಿನ ಈ ಸುಂದರ ರಾಜನು ಮೆರವಣಿಗೆಯಿಂದ ಹೋಗಿ ವೈಗೈ ನದಿಯಲ್ಲಿ ಇಳಿಯುವುದು ಬಹು ದೊಡ್ಡ ಉತ್ಸವವಾಗಿರುತ್ತದೆ.

ಅಳಗರ್ ಆಲಯದ ಮೇಲಿನ ಮಲೆಯ ಉನ್ನತ ಜಾಗದಲ್ಲಿ ಅರುಪಡೈ ವೀಡುಗಳಲ್ಲಿ ಒಂದಾದ ಪಳಮುದಿರ್‌ಶೋಲೈ ವನದಲ್ಲಿ ಮುರುಗನನ್ನೂ ಕಾಣಬಹುದು.


ಅಳಗರ್ ಆಲಯ



ತಿರುಪ್ಪರಕ್ಕುನ್ರಂ

ಮದುರೈಯಿಂದ ದಕ್ಷಿಣಕ್ಕೆ 6 ಮೈಲು ದೂರವಿರುವ ತಿರುಪ್ಪರಕ್ಕು
ದಲ್ಲಿ ಕುಮಾರಸ್ವಾಮಿ ಆಲಯಸ್ಥನಾಗಿರುವನು. ನಕ್ಕೀರರ್ ಎಂಬ ಮ
ಕವಿ ತಿರುಮುರುಗಾಟ್ರುಪ್ಪಡೈ ಎಂಬ ಕಾವ್ಯವನ್ನು ಹಾಡಿದುದು ಇಲ್ಲಿಯ
ಇದು ಮುರುಗನ ಅರುಪಡೈವೀಡುಗಳಲ್ಲಿ ಇನ್ನೊಂದು. ಕುಮಾರಸ್ವಾ
ಶೂರ ಸಂಹಾರಮಾಡಿ, ದೇವತೆಗಳಿಗೆ ಬಿಡುಗಡೆ ನೀಡಿ, ಇಂದ್ರನ ಮಗಳ
ದೈವಯಾಯ್ನೈಯನ್ನು ಮದುವೆಯಾಗಿ ಮದುಮಗನ ದರ್ಶನ ಕೊಡ
ಸ್ಥಳವಿದು. ಕೊರೆಯಲ್ಪಟ್ಟ ಗುಹಾಲಯವಾಗಿ ಇದು ಒಪ್ಪುತ್ತದೆ. ಲಿ
ರೂಪದ ಪರಂಗಿರಿನಾಥನು ಇಲ್ಲಿಯ ಮೂಲ ದೈವ. ಆದರೂ ದೇವಾಲ
ದಲ್ಲಿ ಮುರುಗನಿಗೇ ಪ್ರಥಮಸ್ಥಾನ. ಗಣಪತಿ, ವಿಷ್ಣು, ದುರ್ಗೆ,
ಭಗವಾನ್ ಮೊದಲಾದವರಿಗೂ ಇಲ್ಲಿ ಗುಡಿಗಳಿವೆ. ಈ ಆಲಯದ ಮು
ಮಂಡಪದಲ್ಲಿ ಶಿಲ್ಪಗಳು ತುಂಬಿದ 48 ದೊಡ್ಡ ಕಂಬಗಳು ನಿಂತಿವೆ.

ತಿರುಪ್ಪರಂಕುನ್ರಂ





ನಾರದ–ಮುರಗನ್–ದೈವಯಾನೆ.

ಪುರಾಣ ಕಥೆಗಳು

ಒಂದುಸಾರಿ ಇಂದ್ರನು ತನಗೆ ಬಂದ ಬ್ರಹ್ಮಹತ್ಯಾ ದೋಷವ
ಕಳೆದುಕೊಳ್ಳಲಿಕ್ಕಾಗಿ ಕ್ಷೇತ್ರಾಟನೆ ಮಾಡಿಕೊಂಡಿದ್ದನು. ಪಾಂಡ್ಯ ದೇ
ಕದಂಬ ವನದಲ್ಲಿದ್ದ ಒಂದು ಸ್ವಯಂಭೂ ಲಿಂಗವನ್ನು ಪೂಜಿಸಿದ ಕೂಡ
ಅವನ ಪಾತಕ ದೋಷವು ತೊಲಗಿ ಪುನೀತನಾದನು. ಆನಂದಗೊ
ಇಂದ್ರನು ಆ ಲಿಂಗದ ಮೇಲೆ. ಉನ್ನತವಾದೊಂದು ವಿಮಾನವನ್ನಿರಿಸಿ, ತ
ಲೋಕಕ್ಕೆ ಹೊದನು. ಅಂದಿನಿಂದ ಅಲ್ಲಿ ದೇವಪೂಜೆ ನಡೆಯಲು ತೊಡಗಿತ
ಅನೇಕ ವರ್ಷಗಳ ಮೇಲೆ ಧನಂಜಯನೆಂಬ ವಣಿಕ ಶ್ರೇಷ್ಠನು ಒಂದು ರಾ
ಆ ದೇವಾಲಯದಲ್ಲಿ ತಂಗಿರುವಂತಾಯಿತು. ಆಗ ಅಲ್ಲಿ ದೇವತೆಗಳಿ
ಪೂಜೆ ನಡೆಯುವುದನ್ನು ನೋಡಿ ಬೆರಗಾಗಿ, ರಾಜಧಾನಿಯಾದ ಮಣಪೂ
ಹೋಗಿ. ರಾಜನಾದ ಕುಲಶೇಖರ ಪಾಂಡ್ಯನೊಂದಿಗೆ ಆ ಸಂಗತಿ ಹೇಳಿದನ
ರಾಜನು ಕದಂಬ ವನಕ್ಕೆ ಹೋಗಿ ಮಹಾದೇವನನ್ನು ಸೇವಿಸಿ, ಆ ದೇವ
ಆಜ್ಞೆಯಂತೆ ದೇವಾಲಯವನ್ನೂ, ಮದುರೈ ನಗರವನ್ನೂ ನಿರ್ಮಿಸಿದನು.

ತಡಾತಗೈ

ಮದುರೈಯನ್ನು ಅಳಿದ ಮಲಯಧ್ವಜ ಪಾಂಡ್ಯನೂ, ಅವನ ಪ
ಕಾಂಚನಮಾಲೆಯೂ ಪುತ್ರ ವಾಂಛೆಯಿಂದ ಯಾಗ ಮಾಡಿದರು. ಯ
ಕುಂಡದಿಂದ ಉಮಾದೇವಿ ಮೂರು ಮೊಲೆಗಳ ಶಿಶು ರೂಪದಲ್ಲಿ ಉದ್ಭವಿ
ದಳು. ಮಗುವಿನ ರೂಪವನ್ನು ಕಂಡು ಕಳವಳಗೊಂಡ ರಾಜನಿಗೆ "ಇವಳ
ತನಗೆ ತಕ್ಕ ವರನನ್ನು ನೋಡಿದ ಕೂಡಲೇ ಒಂದು ಮೊಲೆ ಮಾಯ
ವಾಗುತ್ತದ" ಎಂದು ಅಶರೀರವಾಣಿಯಾಯಿತು. ಅದನ್ನು ಕೇಳಿ ನೆಮ್ಮ
ಗೊಂಡ ರಾಜನು ಮಗುವಿಗೆ "ತಡಾತಗೈ" ಎಂದು ಹೆಸರಿಟ್ಟು, ಸಕಲ ವಿದ
ಗಳನ್ನೂ ಕಲಿಸಿ ಬೆಳೆಯಿಸಿದನು. ಮಲಯಧ್ವಜನ ತರುವಾಯ ತಡಾತಗ
ಸಿಂಹಾಸನ ವೇರಿ ಅರಸಿಯಾದಳು. ಯುದ್ಧ ವಿದ್ಯೆಯಲ್ಲಿ ಪ್ರವೀಣೆಯಾ
ತಡಾತಗೈ ನಾಲ್ಕು ದಿಕ್ಕುಗಳನ್ನೂ ಗೆದ್ದು ಶಿವನನ್ನು ಗೆಲ್ಲಲು ಕೈಲಾಸಕ
ಹೋದಳು. ಅಲ್ಲಿ ಮಹಾದೇವನನ್ನು ನೋಡಿದ ಕೂಡಲೇ ಅವಳ ಮೂರನೆ



ತಡಾತಗೈ

(ಪುದು ಮಂಡಪಮಂ)

ಸ್ತನವು ಮಾಯವಾಯಿತು. ಆಗ ಅವಳು ಶಿವನೇ ತನ್ನ ಗಂಡನೆಂದು ಅರಿ
ಆನಂದಪುಲಕಿತೆಯಾದಳು. ಪರಮಶಿವನು ಮದುರೈಗೆ ಬಂದು ತಡಾತ
ಯನ್ನು ಮದುವೆಯಾಗಿ ಸೌಂದರ್ಯ ಪಾಂಡ್ಯನೆಂಬ ಹೆಸರಿನಿಂದ ಸಿಂಹಾಸನವನ
ಅಲಂಕರಿಸಿ ಪರಿಪಾಲನೆ ಮಾಡಿದನು. ಅನಂತರ ಮುರುಗನ ಅವತಾರವಾ
ಉಗ್ರ ಪಾಂಡ್ಯನಿಗೆ ಪಟ್ಟ ಕಟ್ಟಿ, ಪತ್ನೀಸಹಿತ ದೇವಾಲಯಕ್ಕೆ ಹೋ
ಮೀನಾಕ್ಷೀಸುಂದರೇಶ್ವರರಾಗಿ ದೇವೀ ದೇವರೂಪಿಗಳಾಗಿ ಈಗಲ
ಇರುವರು.

ದೇವಾಲಯ ಚರಿತ್ರೆ

ಮದುರೈ ದೇವಾಲಯಗಳಲ್ಲಿ ಪ್ರಾಮುಖ್ಯತೆ ಪಡೆದ ಭಾಗ
ಸ್ವಾಮಿಯ ಆಲಯ ಮತ್ತು ಇಂದ್ರ ವಿಮಾನ. ಮದುರೈ ನಗರವ
ದೇವಾಲಯವೂ 3600 ವರ್ಷಗಳಿಗೂ ಹಿಂದಿನವು ಎಂದು ತಿಳಿದುಬಂದಿದ
ಕ್ರಿ.ವ. ಏಳನೇ ಶತಮಾನದಲ್ಲಿ ಸ್ವಾಮಿಯ ಆಲಯವೂ ಒಳಗಿನ ಪ್ರಾಕಾರವ
ಮಾತ್ರವೇ ಇದ್ದಿತೆಂದು, ತಿರುಜ್ಞಾನ ಸಂಬಂಧರ ಒಂದು ಪದ್ಯದಿಂದ ಗೊತ
ಗುತ್ತದೆ. ತಾಯಿ ಮೀನಾಕ್ಷಿಗೆ ಪ್ರತ್ಯೇಕವಾಗಿ ಆಲಯವೆದ್ದುದು 12ನೆಯ
ಶತಮಾನದಲ್ಲಿ ಮದುರೈಯನ್ನು ಪಾಲಿಸಿದ ಶಡೈಯವರ್ಮ ಕುಲಶೇಖ
ಪಾಂಡ್ಯನಿಂದ ಎಂದು ತಿಳಿದುಬಂದಿದೆ.

ಕ್ರಿ.ವ. 13ನೇ ಶತಮಾನದಲ್ಲಿ ಮಾರವರ್ಮನ ಸುಂದರ ಪಾಂಡ್ಯನ
ದೇವಾಲಯದ ಸುತ್ತಲೂ ಆವರಣದ ಗೋಡೆ ಎಬ್ಬಿಸಿ, ಪೂರ್ವ ದಿಕ್ಕಿ
ಗೋಪುರ ಕಟ್ಟಿಸಿದನು. ಮೇಲು ಗೋಪುರವು 14ನೆಯ ಶತಕದಲ್ಲಿ ಕಟ್ಟಲ್ಪ
ಟ್ಟಾಗಲೇ ಕೆಲವು ಚಿಕ್ಕ ಗೋಪುರಗಳೂ ಎದ್ದುವು. ಉತ್ತರ ದಿಕ್ಕಿನ ಗೋಪುರ
ವನ್ನು ಕಟ್ಟಿಸಿದ ಕೃಷ್ಣವೀರಪ್ಪ ನಾಯಕರ್‌ನಿಂದಲೇ ಧ್ವಜಮಂಟಪವು
ಕಟ್ಟಲ್ಪಟ್ಟಿತು. ಆಯಿರಕ್ಕಾಲು ಮಂಡಪದ ನಿರ್ಮಾಣಕ ಅರಿಯನಾಥ
ಮುದಲಿಯಾರ್. 17ನೇ ಶತಮಾನದಲ್ಲಿ ಆಳಿಕೊಂಡಿದ್ದ ತಿರುಮಲೈ ನಾಯ
ಕರ್‌ನಿಂದ ಪುದು ಮಂಡಪವೂ, ಅವನ ಪತ್ನಿಯರಿಂದ ಅಷ್ಟಶಕ್ತಿ ಮಂಡಪವು
ನಿರ್ಮಿಸಲ್ಪಟ್ಟವು. ವಂಡಿಯೂರ್‌ತೆಪ್ಪಕ್ಕುಳವೂ, ಕಿಳಿಕ್ಕೂಟ್ಟು ಮಂಡಪವು
ಈ ಕಾಲದಲ್ಲಿಯೇ ನಿರ್ಮಾಣಗೊಂಡುವು. ಆಡಿವೀದಿಯ ಸುತ್ತಲಿನ ಮಂಡಪ

ವನ್ನು ಕಟ್ಟಿಸಿದವಳು ರಾಣೀ ಮಂಗಮ್ಮ. ಈ ರೀತಿಯಾಗಿ ಕ್ರಿ.ಪ. 12 ರಿಂದ 18ನೇ ಶತಮಾನಗಳ ಮಧ್ಯದ 600 ವರ್ಷ ಕಾಲದಿಂದ ದೇವಾಲಯ ನಿರ್ಮಾಣ ಅಭಿವೃದ್ಧಿ ಪಡೆಯುತ್ತ ಪೂರ್ತಿಯಾಗಿದೆ.


ಒಟ್ಟಿನಲ್ಲಿ ಮದುರೈ ದೇವಾಲಯವನ್ನು ರಾಜರೂ, ಧನವಂತರೂ, ವರ್ತಕ ಪ್ರಮುಖರೂ ಆಗಾಗ ಮಾಡಿದ ಸೇವಾಕಾರ್ಯಗಳ ಮೂಲಕ ಅಂದಗೊಳಿಸಿದ್ದಾರೆ. 1877ರಲ್ಲಿ ಏಳು ಆಲಯ ನಗರದವರು ದೊಡ್ಡ ದೊಂದು ಸೇವಾಕಾರ್ಯ ನಡೆಸಿದರು. ಈ ಕಾರ್ಯದಲ್ಲಿ ಕಂಬತ್ತಡಿ ಮಂಡಪ ದಲ್ಲಿರುವ ಅದ್ಭುತ ಶಿಲ್ಪಗಳನ್ನು ಧರಿಸಿದ ಎಂಟು ಕಂಬಗಳನ್ನು ಇಡಿಸಿದು ದಲ್ಲದೆ, ಮೊಟ್ಟೈ ಗೋಪುರವನ್ನು ದುರಸ್ತಿ ಮಾಡಿಸಿದರು. 20ನೇ ಶತಮಾನದಲ್ಲಿಯೂ ದೊಡ್ಡದೊಂದು ಸೇವಾಕಾರ್ಯ ನಡೆದಿದೆ. 1960–63ರಲ್ಲಿ ತಮಿಳ್ ಮೇಧಾವಿ ಶ್ರೀ ಪಿ. ಟಿ. ರಾಜನ್ ಅವರ ಅಧ್ಯಕ್ಷತೆಯಲ್ಲಿ ಮದುರೈಯ ಎಲ್ಲಾ ಗೋಪುರಗಳೂ ನವೀನೀಕರಿಸಲ್ಪಟ್ಟು. ಶಿಲಾಶಿಲ್ಪಗಳೆಲ್ಲ ವರ್ಣಮಯವಾದುವು. ಹೊಸದಾಗಿ ಕಟ್ಟಲ್ಪಟ್ಟ ಯಂಗೈಯರ್ಕರಸಿ ಮಂಡಪವು, ಈ ಸೇವಾಕಾರ್ಯದ ಮಹತ್ವಕ್ಕೆ ಒಂದು ಸುಂದರ ನಿದರ್ಶನ ಚಿಹ್ನವಾಗಿ ಮೆರೆಯುತ್ತಿದೆ.

ಉತ್ಸವಗಳು

ಮದುರೈಯಲ್ಲಿ ಪ್ರತಿ ತಿಂಗಳೂ ಉತ್ಸವ ನಡೆದುಕೊಂಡಿರುತ್ತವೆ. ಮಹಾದೇವನ ಲೀಲಾ ವಿಲಾಸಗಳ ಕಾವ್ಯವಾದ ತಿರುವಿಳೈಯಾಡಲಿನೊಳಗಿನ ಘಟನೆಗಳೆಲ್ಲಾ ಉತ್ಸವಗಳಾಗಿ ಆಚರಿಸಲಾಗುತ್ತವೆ. ಉತ್ಸವಕಾಲಗಳಲ್ಲಿ ಅರ್ಚಕರು ಶಿವಲೀಲಾವಿಲಾಸಗಳನ್ನು ನಡೆಯಿಸಿ ತೋರಿಸುತ್ತಾರೆ. ಮೇಘ, ಸಿಂಹ, ಮಕರ ಮಾಸಗಳಲ್ಲಿ ನಡೆಯುವ ಉತ್ಸವಗಳು ವಿಶೇಷವೆನಿಸುತ್ತವೆ. ಹೇಮಂತ ಋತುವಿನ ಚಿತ್ರಾ ಪೌರ್ಣಮೆಯ ದಿನ ನಡೆಯುವ ಮೀನಾಕ್ಷೀ ಕಲ್ಯಾಣವೂ, ಅಳಗರ್ ಸ್ವಾಮಿ ವೈಗೈ ನದಿಯಲ್ಲಿಳಿಯುವ ಅತಿ ವೈಭವದ ಉತ್ಸವ ದೃಶ್ಯವೂ ಕಣ್ಮನಗಳಿಗೆ ದಿವ್ಯವಾದ ಔತಣಗಳು.

ಆಲಯಗಳ ಮಹಾನಗರ

ಅರುವತ್ನಾಲ್ಕು ಶಕ್ತಿ ಪೀಠಗಳಲ್ಲಿ ಮೊದಲನೆಯದಾಗಿ ಬೆಳಗುವು
ಮದುರೈ. ಪರದೇಶದವರು ಕೂಡಾ ಕಂಡು ಬೆರಗಾಗುವಂತಹುದು ನಗ
ನಿರ್ಮಾಣ ರೀತಿ. ತಿರುಮಲೈ ನಾಯಕರ್ ಮಹಲು, ಗಾಂಧಿ ಮ್ಯೂಸಿಯ
ವೈಗೈ ನದಿ, ವೆಂಡಿಯೂರ್‌ತೆಪ್ಪಕ್ಕುಳಂ ಇವು ಊರಿಗೇ ಮೆರುಗೇರಿ
ವಂಥವು. ಅಂಬರ ಚುಂಬಿತ ಗೋಪುರಗಳು, ಕಾವ್ಯಗಳನ್ನು ಹ
ತೋರಿಸುವಂತಹ ಶಿಲ್ಪಗಳು ತುಂಬಿದ ಅಂಗೈಯಾರ್‌ಕಣ್ಣಿಯ ಆಲ
ಇವುಗಳು ಪಾಂಡ್ಯ ರಾಜರು ತಮಿಳುನಾಡಿಗೆ ಸಮರ್ಪಿಸಿದ ಅಸಮಾನವಾ
ದಿವ್ಯ ಕಾಣಿಕೆಗಳು. ಸೌಂದರ್ಯ ತುಂಬಿ ತುಳುಕುವ ಆಲಯ ಸಮುದಾ
ವನ್ನು ತನ್ನೊಳಗಿರಿಸಿ, ಧರಣಿ ಮಂಡಲವೇ ಬೆರಗಾಗುವಂತೆ ಉನ್ನತಿಗೊಂ
ಬೆಳಗುತ್ತಿದೆ ದೇವಾಲಯಗಳ ಮಹಾನಗರವಾದ ಮದುರೈ.



PRINTED BY: SRINIVAS INDUSTRIES, SIVAKASI.



